
ಬೆಟ್ಟದ ಮೇಲಿನ ಕುನ್ಲೆ ವಿಹಾರ

ಪರ್ವತಗಳ ನಡುವಿನ ಬಯಲಿನಲ್ಲಿ ಅದು ನೆಲಕ್ಕೆ ನೆಟ್ಟ ಬುಗುರಿಯಂತಿತ್ತು. ಅದರ ಮೇಲೆ 16ನೇ ಶತಮಾನದಲ್ಲಿದ್ದ ಕುನ್ಲೆ ಎಂಬ ಸಂತನ ಪ್ರಾಚೀನ ವಿಹಾರ. ನಾವು ವಿಹಾರವಿರುವ ಬೆಟ್ಟವನ್ನೇರುವಾಗ ಸೂರ್ಯ ಅಸ್ತಮಿಸುತ್ತಿದ್ದನು. ಕೆಳಗಿನ ಕಣಿವೆಯಲ್ಲಿ ಭತ್ತದ ನಸುಹಳದಿ ಗದ್ದೆಗಳು ಹೊನ್ನಿಗೆ ತಿರುಗುತ್ತಿದ್ದವು. ವಿಹಾರದಿಂದ ಮರಳಿ ಬರುತ್ತಿದ್ದ ಕೆಲವು ಬಿಳಿಯರು ನಮಗೆ ಎದುರಾದರು. ‘ಈಗ ವಿಹಾರ ಮುಚ್ಚುವ ಸಮಯ. ಅಲ್ಲಿ ಭೀಕರ ನಾಯಿಗಳಿವೆ. ಕತ್ತಲಾದ ಮೇಲೆ ಅಲ್ಲಿಗೆ ಹೋಗುವುದು ಕ್ಷೇಮಕರವಲ್ಲ’ ಎಂದು ಅವರು ಎಚ್ಚರಿಸಿದರು.

ಭೂತಾನದಲ್ಲಿ ಎಲ್ಲೆಡೆ ಎದ್ದುಕಾಣುವ ಪ್ರಾಣಿ ನಾಯಿ. ನಮ್ಮ ಚಾಲಕ/ಮಾರ್ಗದರ್ಶಿ ಸೋನಂ ಪ್ರಕಾರ, ಭೂತಾನದಲ್ಲಿ ಅಂಜಬೇಕಾದ್ದು ಕಳ್ಳರಿಗಲ್ಲ. ಚಳಿಗೆ ಮತ್ತು ನಾಯಿಗಳಿಗೆ. ವಿಹಾರಗಳಲ್ಲಿ ನಾಯಿಗಳು ಹಿಂಡುಹಿಂಡಾಗಿದ್ದವು. ಉಪಾಸಕರು ವಿಹಾರಕ್ಕೆ ತರುವ ಆಹಾರ ತಿಂದು ಹುಲಿಗಳಾಗಿದ್ದವು. ನಾವು ನಾಯಿಗಳಿಗಂಜಿ ಮರಳಿ ಬರುತ್ತಿರುವಾಗ, ವಿಹಾರಕ್ಕೆ ಹೋಗುತ್ತಿರುವ ತರುಣ ಗಂಡು–ಹೆಣ್ಣಿನ ಜೋಡಿಗಳು ಎದುರಾದವು. ಅವರ ಕಂಕುಳಲ್ಲಿ ಚಾಪೆ–ದಿಂಬು ಇದ್ದವು. ಇಲ್ಲಿನ ನಂಬಿಕೆಯ ಪ್ರಕಾರ, ವಿಹಾರದಲ್ಲಿ ರಾತ್ರಿ ವಸ್ತಿಯಿದ್ದು ಭೋಗ ಮಾಡಿದರೆ, ನಿಸ್ಸಂತಾನಿಗಳಿಗೆ ಸಂತಾನ ಪ್ರಾಪ್ತವಾಗುವುದಂತೆ.

ಹಳ್ಳಿಯನ್ನು ನೋಡಲೆಂದು ಹೋದ ನಾವು ಅಚಾನಕ್ ಸಾಂಸ್ಕೃತಿಕ ಮಹತ್ವದ ಜಾಗಕ್ಕೆ ಮುಟ್ಟಿದ್ದೆವು. ನನಗೆ ರಾತ್ರಿ ನಿದ್ದೆಯೇ ಬರಲಿಲ್ಲ. ಬೆಳಗಿನ ಜಾವವೇ ಎದ್ದು ಲಗುಬಗೆಯಿಂದ ಸಾವಿರ ಮೆಟ್ಟಿಲು ಹತ್ತಿ ವಿಹಾರಕ್ಕೆ ಹೋದೆವು. ಬೆಟ್ಟದ ಮೇಲೆ ಮಂಜು ಇನ್ನೂ ಮುಸುಕಿತ್ತು. ಮಂತ್ರೋಕ್ತವಾದ ವರ್ಣರಂಜಿತ ಪತಾಕೆಗಳು ಒದ್ದೆಗೊಂಡು ಅಲುಗದೆ ಸುಮ್ಮನಿದ್ದವು. ಕುನ್ಲೆಯು ಈ ಬೆಟ್ಟವನ್ನು ಮೊಲೆಯಂತೆ ಕಾಣುತ್ತಿದೆಯೆಂದೇ ವಾಸಕ್ಕೆ ಆರಿಸಿಕೊಂಡಿದ್ದನಂತೆ. ವಿಹಾರದಲ್ಲಿ ಹುಲಿಯಂತಹ ನಾಯಿಗಳು ಅಬ್ಬರಿಸಿ ಬಂದವು. ಭಿಕ್ಕುಗಳು ಕರೆಯದಿದ್ದರೆ ನಮ್ಮನ್ನು ಹರಿದು ಹಾಕುತ್ತಿದ್ದವೊ ಏನೊ. ವಿಹಾರದ ಕೆಲಸಗಾರನು ಹೊಗೆಗೂಡಿನಲ್ಲಿ ಪವಿತ್ರಧೂಮ ಎಬ್ಬಿಸಲು ಕಟ್ಟಿಗೆಯ ಚಕ್ಕೆಗಳನ್ನು ತುಂಬುತ್ತಿದ್ದನು. ತುಸುಹೊತ್ತಲ್ಲೇ ಮೇಲಕ್ಕೆದ್ದ ಹೊಗೆ ಮಂಜಿನೊಂದಿಗೆ ಸೇರಿಕೊಂಡು ಆಗಸ ಮತ್ತಷ್ಟು ಬಿಳುಪಾಯಿತು.

ವಿಹಾರದಲ್ಲಿ ಮೌನ ಮತ್ತು ನಿಗೂಢತೆ ನೆಲೆಸಿತ್ತು. ಊರಿನ ಮನೆಗಳ ಗೋಡೆಗಳ ಮೇಲಿರುವಂತೆ ಶಿಶ್ನಚಿಹ್ನೆಗಳೇನು ಕಾಣಲಿಲ್ಲ. ಕೆಳಗೆ ಆಳ ಕಮರಿಯಲ್ಲಿ ಹೊಳೆ ಕಲರವ ಮಾಡುತ್ತ ಹರಿಯುತ್ತಿತ್ತು. ನಾವು ಅತಿಯಾದ ನಿಗೂಢತೆ ಕಲ್ಪಿಸಿಕೊಂಡಿದ್ದೆವು. ಆದರೆ ಅದೊಂದು ಸಾಧಾರಣ ವಿಹಾರ. ಅದಕ್ಕೆ ಲಗತ್ತಾಗಿರುವಂತೆ ಸಾಲಾಗಿ ಕೋಣೆ ಇದ್ದವು. ಬಹುಶಃ, ಗಂಡು–ಹೆಣ್ಣು ಕೂಡುವ ವ್ಯವಸ್ಥೆ ಅಲ್ಲಿರಬಹುದು. ಉಳಿದಂತೆ ಬೇರೆಬೇರೆ ಕೊಠಡಿಗಳಲ್ಲಿ ಭಿಕ್ಕುಗಳು ಬಿಡಾರ ಮಾಡಿದ್ದರು. ಅದೊಂದು ಕಲಿಕಾಕೇಂದ್ರವೂ ಆಗಿತ್ತು. ಎಲ್ಲಿಂದಲೋ ಗೊಣಗೊಣ ಶಬ್ದ ಬರುತ್ತಿತ್ತು. ಬಾಗಿಲಿಗೆ ಅಡ್ಡವಿದ್ದ ಬಣ್ಣದ ಚಿತ್ರಗಳ ಪರದೆಯನ್ನು ಸರಿಸಿ ಒಳಹೋದೆವು. ಒಬ್ಬ ವೃದ್ಧಲಾಮಾ ತಥಾಗತನ ಪ್ರತಿಮೆಯ ಎದುರು, ಕಿಟಕಿ ಬೆಳಕು ಹಸ್ತಪ್ರತಿಗಳ ಮೇಲೆ ಬೀಳುವಂತೆ ಪದ್ಮಾಸನ ಹಾಕಿ ಕೂತು, ಮಂತ್ರ ಪಠಿಸುತ್ತಿದ್ದನು. ಅವನ ಎರಡೂ ಬದಿ ನಿದ್ದೆಯಿನ್ನೂ ತೊಲಗದ ಮಂಕುಗವಿದ ಕಂಗಳ ಮಕ್ಕಳು ಕೆಂಪುಶಾಟಿ ಹೊದ್ದು ಗುಡ್ಡೆಯಾಗಿ ಕುಳಿತಿದ್ದವು. ಅಪರಿಚಿತರಾದ ನಮ್ಮನ್ನು ಕಂಡು ಅವುಗಳ ಕಣ್ಣಲ್ಲಿ ವಿಚಿತ್ರ ಹೊಳಪು. ನಾವೂ ಒಂದೆಡೆ ಕೂತು ಧ್ಯಾನ ಮಾಡಿದೆವು. ಧ್ಯಾನದಲ್ಲೆಲ್ಲ ಕುನ್ಲೆಯ ಶೃಂಗಾರದ ಚಟುವಟಿಕೆಗಳೇ ಕಣ್ಮುಂದೆ ಬಂದು ಚಿತ್ತ ಅಶಾಂತಿಯ ಹೊಳೆಯಾಯಿತು. ನಮ್ಮನ್ನೇ ಉದಾಸೀನತೆಯಿಂದ, ಆದರೆ ಎಚ್ಚರದಿಂದ ಗಮನಿಸುತ್ತಿದ್ದ ಲಾಮಾ, ಶಿಷ್ಯರಿಗೆ ಸನ್ನೆ ಮಾಡಿದ. ಒಬ್ಬ ಎಳೆಯ ಭಿಕ್ಕು ಬಂದು ನವಿಲುಗರಿ ಸಿಕ್ಕಿಸಿದ ಗಿಂಡಿಯಲ್ಲಿ ಕೊಕ್ಕರೆಕತ್ತಿನಂತೆ ಬಾಗಿದ ಅದರ ತುದಿಯಿಂದ ತೀರ್ಥ ಹಣಿಸಿದನು. ಇನ್ನೊಬ್ಬ ಶಿಷ್ಯನು ಗಜದಂತದಿಂದ ಮಾಡಿದ ಮೊಳದುದ್ದ ಶಿಶ್ನ ತಂದು ಹಣೆಗೆ ಮುಟ್ಟಿಸಿದನು. ಅದು ನಾವು ಹೊರಡಬೇಕೆಂದು ಸೂಚನೆ. ಹೊರಬಂದೆವು.

ಭೂತಾನಿನ ಬಹುತೇಕ ವಿಹಾರಗಳಲ್ಲಿ ಮಂತ್ರಪಠಣೆಗೆ ಯಾಂತ್ರಿಕವಾಗಿ ಕುಳಿತ ಭಿಕ್ಕುಗಳ ಆಕಳಿಸುವ, ನಿದ್ದೆಮಾಡುವ, ಪರಸ್ಪರ ಜಗಳವಾಡುವ, ಪಕ್ಕದವನ ಕಿವಿಗೆ ಚಿಗುಟಿ ಎಚ್ಚರಿಸುವ ಸನ್ನಿವೇಶಗಳಿಗೆ ಸಾಕ್ಷಿಯಾಗಿದ್ದೆವು. ಇದು ಮಕ್ಕಳ ಬಾಲ್ಯವನ್ನು ಕಸಿದುಕೊಂಡು ಒತ್ತಾಯದಿಂದ ಧಾರ್ಮಿಕ ಶಿಕ್ಷಣ ಕೊಡುವ ಎಲ್ಲ ಧಾರ್ಮಿಕ ಶಾಲೆಗಳಲ್ಲಿ ನಡೆವ ವಿದ್ಯಮಾನ. ಬಡವರ ಮಕ್ಕಳೇ ಧರ್ಮಪಾಲನೆಯ ಶಿಕ್ಷಣಕ್ಕೆ ಹೋಗುವುದು ಎಂದು ಸೋನಂ ತಿಳಿಸಿದ. ಭೂತಾನದ ರೈತಾಪಿ ದುಡಿವ ಜನರಲ್ಲಿ ಇರುವ ಮುಗ್ಧತೆ, ಪ್ರಾಮಾಣಿಕತೆ ವಿಹಾರದೊಳಗಿನ


ಲಬೋಸಾದ ಮನೆಯ ಗೋಡೆ ಮೇಲಿನ ಚಿತ್ತಾರ


ವಿಹಾರದಲ್ಲಿನ ಬೌದ್ಧಗುರುವಿನ ಚಿತ್ರ